ಹೊಡೆದಿದ್ದಳಂತೆ. ಜನಾಂಗಭೇದ, ಸೆನ್ಸಾರ್‌ಶಿಪ್, ಲಾಕ್ ಅಪ್ ಬಿಲ್ ಮುಂತಾದ ಸಂಗತಿಗಳನ್ನು ವಿರೋಧಿಸಿ ಕಡೆಯವರೆಗೂ ನಿರಂತರವಾಗಿ ಬರೆದ ಯಾಂಕರ್‌ಳ ವೈಯಕ್ತಿಕ ಜೀವನದ ದುರಂತವನ್ನಷ್ಟೇ ನೋಡುತ್ತ ಅವಳ ಈ ಬಗೆಯ ಸೂಕ್ಷ್ಮ ರಾಜಕೀಯ ನಿಲುವುಗಳನ್ನು ಗಮನಿಸದೆ ಇರುವುದು ಅವಳ ವ್ಯಕ್ತಿತ್ವಕ್ಕೆ ತೋರುವ ಅಗೌರವವಾಗುತ್ತದೆ.

ಮರಣ ಹೊಂದುವ ಸ್ವಲ್ಪ ದಿನಗಳ ಮೊದಲು ಹೊಸ ಕವಿತೆಗಳನ್ನು ಬರೆಯತೊಡಗಿದ್ದ ಇನ್‌ಗ್ರಿಡ್‌ಳ ಕಡೆಗಾಲದ ಕವಿತೆಗಳು 'ಟಾಪ್ಲಿಂಗ್ ಸನ್' ಎಂಬ ಶೀರ್ಷಿಕೆಯೊಂದಿಗೆ ಮರಣಾನಂತರ ಪ್ರಕಟವಾಗಿವೆ. ಯಾಂಕರ್‌ಳ ಸಾವಿಗೂ ಮತ್ತು ಅದಕ್ಕಿಂತ ಮೊದಲು ಆಫ್ರಿಕಾದಲ್ಲಿ ಜರುಗಿದ ಹಲವು ಮಹತ್ವದ ರಾಜಕೀಯ ಬೆಳವಣಿಗೆಗಳಿಗೂ ಹತ್ತಿರದ ಸಂಬಂಧವಿರುವುದರಿಂದ, ಯಾಂಕರ್‌ಳ ಸಾವಿನ ಮೇಲೆ ಹಿಡಿಯಲಾದ ವೈಯಕ್ತಿಕ ಬದುಕಿನ ಭೂತಗನ್ನಡಿಯನ್ನು ಹೊರಳಿಸಿ ಆ ನಾಡಿನ ಕಾಲಘಟ್ಟದ ಮೇಲೆಯೂ ಹಿಡಿದು ನೋಡಬೇಕಾಗುತ್ತದೆ. ಇನ್‌ಗ್ರಿಡ್ ತನ್ನ ಕಾಲದ ಹೋರಾಟಗಳಲ್ಲಿ ನೇರವಾಗಿ ಭಾಗವಹಿಸದೆ ಇದ್ದರೂ ಉತ್ಕಟವೂ, ಸಂವೇದನಾಶೀಲವೂ ಆದ ಅವಳ ಮನಸ್ಸಿಗೆ ನಾಡಿನ ಸಂಕಟಗಳು ಗಾಯ ಮಾಡುತ್ತಿದ್ದವು. ಇನ್‌ಗ್ರಿಡ್ ಪ್ರಾಮಾಣಿಕವಾಗಿ ಅದನ್ನೆಲ್ಲ ದಾಖಲಿಸಿದಳು. ಕವಿಯ ಅತ್ಯಂತ ವೈಯಕ್ತಿಕ ಅನುಭವ ಮತ್ತು ಭಾವನೆಗಳು ಸಾಮಾಜಿಕವೂ, ಚಾರಿತ್ರಿಕವೂ ಆಗುವುದು ಇಂತಹ ಸೃಜನಶೀಲ ನಿಷ್ಠುರತೆ ಮತ್ತು ಪ್ರಾಮಾಣಿಕತೆಯಿಂದಲೇ ಎಂಬುದಕ್ಕೆ ಇನ್‌ಗ್ರಿಡ್ ಕವಿತೆಗಳು ಮಾದರಿಯಂತಿವೆ.

ಜನಾಂಗೀಯ ಭೇದದ ಪರವಾಗಿ ದಕ್ಷಿಣ ಆಫ್ರಿಕಾದಲ್ಲಿ ಮಾಡಲಾಗಿದ್ದ ಕಾನೂನುಗಳನ್ನು ವಿರೋಧಿಸಿ ನ್ಯಾಂಗಾ ಪಟ್ಟಣದ ನಿವಾಸಿಗಳು 1960ರಲ್ಲಿ ಪ್ರತಿಭಟನೆಗಿಳಿದರು. ಸರಿಸುಮಾರು ಇದೇ ಸಮಯದಲ್ಲಿ, ಆಫ್ರಿಕಾದ ಮತ್ತೊಂದು ಪಟ್ಟಣವಾದ ಶಾರ್ಪವಿಲ್ ಪೊಲೀಸ್ ಸ್ಟೇಷನ್ ಎದುರು ಹೆಂಗಸರು, ಮಕ್ಕಳನ್ನೊಳಗೊಂಡ ಕರಿಯರ ಗುಂಪು ಸಾವಿರಾರು ಸಂಖ್ಯೆಯಲ್ಲಿ ನೆರೆಯಿತು. ಅವರ ಪ್ರತಿಭಟನೆಯು ಮುಖ್ಯವಾಗಿ ಹಲವು ದಶಕಗಳಿಂದ ಪ್ರಚಲಿತದಲ್ಲಿದ್ದ 'ಪಾಸ್ ಲಾ' ವಿರೋಧವಾಗಿ ಇತ್ತು. ವರ್ಣನೀತಿಯ ಹಿಂದಿನ ಮುಖ್ಯ ಭೇದಗಳಲ್ಲಿ ಇದು ಮುಖ್ಯ ಸ್ಥಾನದಲ್ಲಿತ್ತು. 'ಪಾಸ್' ಎಂದರೆ ಆಫ್ರಿಕಾದ ಕರಿಯರು ತಮ್ಮದೇ ನಾಡಿನೊಳಗೆ ಓಡಾಡುವಾಗಲೂ ಯಾವಾಗಲೂ ತಮ್ಮ ಬಳಿ ಇಟ್ಟುಕೊಂಡಿರಬೇಕಿದ್ದ 'ಅಪ್ಪಣೆ ಚೀಟಿ'. ಇದನ್ನು ಇಟ್ಟುಕೊಂಡಿರದ ಕರಿಯರನ್ನು ಹೊಡೆಯುವ, ಬಂಧಿಸಿ ಲಾಕಪ್ಪಿನಲ್ಲಿ ಇಡುವ, ಹಿಂಸಿಸುವ ಕೆಲಸವನ್ನು ಪೊಲೀಸರು ಮಾಡುತ್ತಿದ್ದರು. ಇಂಥ ಕಾನೂನಿನ ನಿರ್ಬಂಧಕ್ಕೆ ಒಳಪಟ್ಟಿದ್ದ ಕರಿಯರು ಅದರ ವಿರುದ್ಧ ಪ್ರತಿಭಟನೆ ನಡೆಸಿದರು. ನ್ಯಾಂಗಾ ಮತ್ತು ಶಾರ್ಪವಿಲ್ ಎರಡೂ ಕಡೆಗಳಲ್ಲಿ ಪೋಲಿಸರು ನೆರೆದಿದ್ದ ಜನರ ಮೇಲೆ ಗುಂಡು ಮತ್ತು ಲಾಠಿ ಪ್ರಹಾರ ನಡೆಸಿದರು. ಪರಿಣಾಮವಾಗಿ ಹೆಂಗಸರು, ಮಕ್ಕಳನ್ನು ಒಳಗೊಂಡು ನೂರಾರು ಜನ ಸಾವನ್ನಪ್ಪಿದರು. ಶಾರ್ಪ್‌ವಿಲ್‌ನಲ್ಲಿ ಈ ದುರಂತ ನಡೆದ 1960ರ ಮಾರ್ಚ್, 21ನೇ ದಿನಾಂಕವನ್ನು ದಕ್ಷಿಣ ಆಫ್ರಿಕಾದಲ್ಲಿ ಇಂದು 'ಜನಾಂಗೀಯ ಭೇದ ವಿರುದ್ಧದ ಅಂತರರಾಷ್ಟ್ರೀಯ ದಿನ' ಎಂದು ಆಚರಿಸುತ್ತಾರೆ. ನ್ಯಾಂಗಾ ದುರಂತದ ನಂತರ ಆ ಪ್ರದೇಶವನ್ನು ಇಂದಿಗೂ 'ಜಗತ್ತಿನ ಅತಿ ಅಪಾಯಕಾರಿ ಪ್ರದೇಶ' ಎಂದು ಪರಿಗಣಿಸಲಾಗುತ್ತದೆ.

ನ್ಯಾಂಗಾದ ದುರಂತದಲ್ಲಿ ಪುಟ್ಟ ಮಗುವೊಂದು ತನ್ನ ತಾಯಿಯ ತೋಳುಗಳನ್ನು ಬಲವಾಗಿ ಅಪ್ಪಿ ಸಾವನ್ನಪ್ಪಿದ್ದ ದೃಶ್ಯವನ್ನು ನೋಡಿದ ಇನ್‌ಗ್ರಿಡ್ ಅತ್ಯಂತ ಸಂಕಟಕ್ಕೊಳಗಾದಳು. ತನ್ನ